ಕರ್ನಾಟಕ ಸರ್ಕಾರ

ಸಂ. ಆರ್‌ಡಿ 112 ಇಟಿಸಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 30.9.2010

**ಸುತ್ತೋಲೆ**

ವಿಷಯ: ಜನಗಣತಿ 2011 – ನವೆಂಬರ್ 2010 ಮತ್ತು ಮಾರ್ಚ್ 2011 ರ ನಡುವಣ ಅವಧಿಯಲ್ಲಿ ಚುನಾವಣೆಗಳು ಸಮೀಕ್ಷೆಗಳು – ಮುಂತಾದಂಥ ಯಾವುದೇ ಇತರ ಮುಖ್ಯವಾದ ಕಾರ್ಯಚಟುವಟಿಕೆಗಳನ್ನು ಇಟ್ಟುಕೊಳ್ಳದಿರುವುದು.

ಉಲ್ಲೇಖ: ಜನಗಣತಿ ಕಾರ್ಯಗಳ ನಿರ್ದೇಶಕರು, ಬೆಂಗಳೂರು – ಇವರ ಅರೆ ಸರ್ಕಾರಿ ಪತ್ರ ಸಂ. ಸಿಎಟಿ/7/ಕೆಆರ್‌ಜಿ/2009 ದಿನಾಂಕ: 13.7.2010.

-------

2011ರ ಮೊದಲನೇ ಹಂತದ ಜನಗಣತಿಯನ್ನು ಅಂದರೆ ಮನೆ ಪಟ್ಟಿ ಮಾಡುವುದು ಮತ್ತು ಮನೆ ಗಣತಿ ಹಾಗೂ ರಾಷ್ಟ್ರೀಯ ಜನಸಂಖ್ಯಾ ನೋಂದಣಿ ಪುಸ್ತಕದ ತಯಾರಿಯನ್ನು ರಾಜ್ಯದಲ್ಲಿ 15ನೇ ಏಪ್ರಿಲ್–2010ರಿಂದ 1ನೇ ಜೂನ್ 2010ರವರೆಗೆ ಯಶಸ್ವಿಯಾಗಿ ನಡೆಸಲಾಯಿತು. ಈಗ 2011ರ ಎರಡನೇ ಹಂತದ ಮತ್ತು ಅತ್ಯಂತ ಮುಖ್ಯವಾದ ಹಂತದ ಜನಗಣತಿಯನ್ನು ನಡೆಸುವ ಕಾರ್ಯವನ್ನು 9ನೇ ಫೆಬ್ರವರಿ 2011 ರಿಂದ 5ನೇ ಮಾರ್ಚ್ 2011ರವರೆಗೆ ನಡೆಸಲಾಗುತ್ತದೆ.

ಜನಗಣತಿ ಕಾರ್ಯವು ಜಟಿಲ ಹೆಜ್ಜೆಗಳ ಸಂಪರ್ಕ ಜಾಲವನ್ನು ಒಳಗೊಂಡಿರುವ ಅತ್ಯಂತ ದೊಡ್ಡ ಆಡಳಿತಾತ್ಮಕ ಕಾರ್ಯವಾಗಿದ್ದು ಇದನ್ನು ಬಹು ಎಚ್ಚರಿಕೆ ಮತ್ತು ನಿಖರವಾಗಿ ಯೋಜಿಸಿ ಸಮರೋಪಾದಿಯಲ್ಲಿ ನಿರ್ದಿಷ್ಟ ಸಮಯದೊಳಗೆ ಮಾಡಬೇಕಾಗಿದೆ. ವಿವಿಧ ಸ್ಥಾನಗಳಲ್ಲಿ ಜನಗಣತಿ ಕಾರ್ಯದಲ್ಲಿ ತೊಡಗುವ ಎಲ್ಲ ಅಧಿಕಾರಿಗಳಿಗೆ ಮತ್ತು ನೌಕರರಿಗೆ ಕ್ಷೇತ್ರ ಕಾರ್ಯಗಳನ್ನು ಪ್ರಾರಂಭಿಸುವುದಕ್ಕೆ ಮುಂಚೆ ಡಿಸೆಂಬರ್ 2010 ಮತ್ತು ಜನವರಿ 2011ರ ನಡುವೆ ತೀವ್ರವಾದ ತರಬೇತಿಯನ್ನು ನೀಡಲಾಗುತ್ತದೆ. ಜನಗಣತಿ ಕಾರ್ಯವು 2011ರ ಜನಗಣತಿಯ ಅತ್ಯಂತ ಪ್ರಮುಖ ಹಂತವಾಗಿದ್ದು ಹಾಗೂ ಯಾರೊಬ್ಬ ವ್ಯಕ್ತಿಯನ್ನೂ ಬಿಡದೆ ವಸತಿ ರಹಿತ ಜನರು ಮತ್ತು ಸಂಸ್ಥಾರೂಪ ಕುಟುಂಬಗಳಲ್ಲಿ ವಾಸವಾಗಿರುವ ಜನರೂ ಸೇರಿದಂತೆ ಪ್ರತಿಯೊಬ್ಬ ವ್ಯಕ್ತಿಯ ಗಣತಿಯನ್ನು ಒಳಗೊಂಡಿರುವುದರಿಂದ ಡಿಸೆಂಬರ್ 2010 ಮತ್ತು ಮಾರ್ಚ್ 2011ರ ನಡುವಣ ಅವಧಿಯಲ್ಲಿ ಜನಗಣತಿ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡಬಹುದಾಗಿರುವ ಚುನಾವಣೆಗಳು, ಸಮೀಕ್ಷೆಗಳು ಮುಂತಾದಂಥ ಯಾವುದೇ ಇತರ ಮುಖ್ಯವಾದ ಕಾರ್ಯಚಟುವಟಿಕೆಗಳನ್ನು ನಿಶ್ಚಯವಾಗಿ ಇಟ್ಟುಕೊಳ್ಳದಿರುವ ಅಗತ್ಯವಿದೆ. ಇದರಿಂದಾಗಿ ಜನಗಣತಿ ಕಾರ್ಯಗಳನ್ನು ನಡೆಸುವ ಜವಾಬ್ದಾರಿಗಳನ್ನು ನಿರ್ವಹಿಸುವ ಜಿಲ್ಲೆಗಳು, ತಾಲ್ಲೂಕುಗಳು ಮತ್ತು ಪಟ್ಟಣಗಳು/ನಗರಗಳಲ್ಲಿನ ಇಡೀ ಆಡಳಿತ ಯಂತ್ರವು ಇಡೀಯಾಗಿ ಈ ರಾಷ್ಟ್ರೀಯ ಪ್ರಮುಖ ಪ್ರಯತ್ನದಲ್ಲಿ ಸ್ವತಃ ಅರ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆದ್ದರಿಂದ, ರಾಜ್ಯ ಚುನಾವಣಾ ಆಯೋಗವೂ ಸೇರಿದಂತೆ ರಾಜ್ಯ ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರು 15ನೇ ಡಿಸೆಂಬರ್ 2010 ಮತ್ತು ಮಾರ್ಚ್ 2011 ರ ನಡುವಣ ಅವಧಿಯಲ್ಲಿ ರಾಜ್ಯದಲ್ಲಿ ಚುನಾವಣೆಗಳು, ಸಮೀಕ್ಷೆಗಳು, ಮುಂತಾದ ಯಾವುದೇ ಮುಖ್ಯವಾದ ಮತ್ತು ಪ್ರಮುಖವಾದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳದಿರುವಂತೆ ಕೋರಲಾಗಿದೆ.

(ಎಸ್.ವಿ. ರಂಗನಾಥ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಕರ್ನಾಟಕ ಸರ್ಕಾರದ ಎಲ್ಲ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2. ಎಲ್ಲ ಇಲಾಖಾ ಮುಖ್ಯಸ್ಥರು.
3. ಆಯುಕ್ತರು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರು.
4. ಎಲ್ಲ ಪ್ರಾದೇಶಿಕ ಆಯುಕ್ತರು.
5. ಎಲ್ಲ ಜಿಲ್ಲಾಧಿಕಾರಿಗಳು.
6. ಜನಗಣತಿ ಕಾರ್ಯಗಳ ರಿಜಿಸ್ಟ್ರಾರ್ ಜನರಲ್, ನವದೆಹಲಿ.
7. ಜನಗಣತಿ ಕಾರ್ಯಗಳ ನಿರ್ದೇಶಕರು, ಕರ್ನಾಟಕ, ಬೆಂಗಳೂರು.